# ವ್ಯಾಸದರ್ಶನ

ವ್ಯಾಸಭಾರತದಲ್ಲಿ ಎರಡು ಮಹದ್ದರ್ಶನಗಳುಂಟು. ಮೊದಲನೆಯದು 'ವಿಶ್ವರೂಪ ದರ್ಶನ', ಮತ್ತೊಂದು 'ವ್ಯಾಸದರ್ಶನ'! ಧೃತರಾಷ್ಟ್ರ–ವಿದುರ–ಗಾಂಧಾರಿ ಮುಂತಾದವರು ಕಾಡಿನಲ್ಲಿದ್ದಾರೆ. ಇವರು ಕಾಡಿಗೆ ಬಂದು ಹಲವು ಸಂವತ್ಸರಗಳೇ ಕಳೆದಿವೆ. ಅವರು ನೆಲೆನಿಂತಿರುವ ಆಶ್ರಮವು ಪ್ರಶಾಂತವಾಗಿದೆ. ಪ್ರಕೃತಿಯು ಅವರಿಗೆ ಪೂರಕವಾಗಿದ್ದಾಳೆ. ಬೈಗು–ಬೆಳಗು ದಿನದಿನವೂ ಸರಿಯುತ್ತಿದೆ. ಇವರೆಲ್ಲರ ವಾನಪ್ರಸ್ಥಾಶ್ರಮದ ಜೀವನದಲ್ಲಿ ಲೋಕದ ಎಲ್ಲಾ ಜಾಡ್ಯಗಳು ತೊಲಗಿವೆ. ಇತ್ತ ಹಸ್ತಿನಾವತಿಯಲ್ಲಿದ್ದ ಧರ್ಮರಾಯ ಮುಂತಾದವರು ಧೃತರಾಷ್ಟ್ರ–ಗಾಂಧಾರಿ–ವಿದುರ ಮೊದಲಾದವರನ್ನು ನೋಡಲು ಬಂದಿದ್ದಾರೆ. ಒಂದು ದಿನ ದ್ವೈಪಾಯನರು ಆಶ್ರಮಕ್ಕೆ ಬಂದರು. ಅವರು ಬಂದೊಡನೆ ಆಶ್ರಮಕ್ಕೆ ಜೀವಚೈತನ್ಯವೇ ಬಂದಂತಾಯಿತು. ಪ್ರತಿಯೊಬ್ಬರೂ ವ್ಯಾಸಮುನಿಗಳಿಗೆ ನಮಸ್ಕರಿಸಿ, ಅವರಿಂದ ಆಶೀರ್ವಾದಗಳನ್ನು ಪಡೆದರು.

ಆಗ ವ್ಯಾಸಮಹರ್ಷಿಗಳು ಗಾಂಧಾರಿ, ದ್ರೌಪದಿ, ಸುಭದ್ರೆಯರ ದುಃಖದ ಅಂತರಂಗವನ್ನು ತಿಳಿದುಕೊಂಡರು. ಅವರೆಲ್ಲರ ಬಯಕೆ ಏನೆಂಬುದು ಮುನಿಗಳಿಗೆ ಗೊತ್ತಾಯಿತು. ಆಗ ಅವರು ಧೃತರಾಷ್ಟ್ರನಿಗೆ 'ನಿನ್ನ ಮನಸ್ಸಿನಲ್ಲಿರುವ ಎಲ್ಲಾ ಸಂಶಯಗಳನ್ನು ನಿವಾರಿಸಲೆಂದೇ ನಾನು ಇಲ್ಲಿಗೆ ಬಂದಿದ್ದೇನೆ. ನಿನ್ನ ಅಪೇಕ್ಷೆಯನ್ನು ಈಡೇರಿಸುತ್ತೇನೆ ಹೇಳು' ಎಂದರು. ಆಗ ಧೃತರಾಷ್ಟ್ರ ಯುದ್ಧದಿಂದ ಮಕ್ಕಳು–ಮೊಮ್ಮಕ್ಕಳನ್ನು ಕಳೆದುಕೊಂಡ ದುಃಖ ಬಾಧಿಸುತ್ತಿರುವುದನ್ನೂ ಹೇಳಿದ. ಆಗ ಗಾಂಧಾರಿ ಎದ್ದುನಿಂತು, 'ಯುದ್ಧ ಮುಗಿದು ಹದಿನಾರು ವರ್ಷಗಳು ಕಳೆದಿವೆ. ನೂರೊಂದು ಜನ ನನ್ನ ಮಕ್ಕಳೂ ನೆನಪಿಗೆ ಬರುತ್ತಿದ್ದಾರೆ. ಅವರೆಲ್ಲರ ನೆನಪು ನನ್ನನ್ನೂ ಬಾಧಿಸುತ್ತಿದೆ' ಎಂದು ಹೇಳಿಕೊಂಡಳು. ಆಗ ಕುಂತಿಯು ಒಂದೆಡೆ ಮೌನವಾಗಿ ಕುಳಿತಿದ್ದಳು. ವ್ಯಾಸಮಹರ್ಷಿಗಳಿಗೆ ಕುಂತಿಯ ಮನಸ್ಸಿನ ತುಮುಲ ತಿಳಿಯಿತು. ಆಗ ಅವರು 'ಮಗಳೇ, ನೀನು ಏನನ್ನಾದರೂ ಹೇಳಲು ಇಷ್ಟಪಡುತ್ತೀಯಾ? ನಿನ್ನ ಮನಸ್ಸನ್ನು ಕೊರೆಯುತ್ತಿರುವುದನ್ನು ಹೇಳಿಬಿಡು' ಎಂದರು. ಆಗ ಕುಂತಿಯು ತಲೆತಗ್ಗಿಸಿ ಕರ್ಣನ ಜನ್ಮದ ರಹಸ್ಯವನ್ನು ಹೇಳಿದಳು. ಒಮ್ಮೆ ಕರ್ಣನನ್ನು ತನಗೆ ದರ್ಶನ ಮಾಡಿಸಿ ಎಂದಳು. ಇದರ ಜತೆಗೆ ಧೃತರಾಷ್ಟ್ರ– ಗಾಂಧಾರಿಯರ ಬಯಕೆಯನ್ನು ಈಡೇರಿಸಬೇಕೆಂದು ಕುಂತಿ ಪ್ರಾರ್ಥಿಸಿದಳು. ವ್ಯಾಸಮುನಿ ಕುಂತಿ–ಗಾಂಧಾರಿಯರಿಗೆ ಸಮಾಧಾನ ಪಡಿಸಿ 'ನಿಮಗೆಲ್ಲರಿಗೂ ರಣರಂಗದಲ್ಲಿ ಪ್ರಾಣತ್ಯಾಗ ಮಾಡಿದ ಎಲ್ಲರನ್ನೂ ಕಾಣಿಸಿಕೊಡುವೆ' ಎಂದು ಹೇಳಿದರು. ಅಲ್ಲಿದ್ದ ಎಲ್ಲರಿಗೂ ರೋಮಾಂಚನ ಸಂಭ್ರಮಗಳು ಉಂಟಾದುವು.

ಧೃತರಾಷ್ಟ್ರ, ಪಾಂಡವರು, ಋಷಿಗಳು, ತಪಸ್ವೀಜನ, ದ್ರೌಪದಿ–ಸುಭದ್ರೆ ಅರಮನೆಯ ಎಲ್ಲಾ ಸ್ತ್ರೀಯರು ಭಾಗೀರಥಿ ನದಿ ತೀರಕ್ಕೆ ಬಂದರು. ಆ ಮಹಾನದಿಯಲ್ಲಿ ಎಲ್ಲರೂ ಸ್ನಾನಮಾಡಿದರು. ಆ ರಾತ್ರಿಗಾಗಿ ಕಾದು ನಿಂತರು. ಸಾಯಂಕಾಲ ಆಯಿತು. ಎಲ್ಲರೂ ಪ್ರಾರ್ಥನೆ ಮಾಡಿ ವ್ಯಾಸರ ಬಳಿಹೋದರು. ಮಹರ್ಷಿ ವ್ಯಾಸರು ನದಿಯಲ್ಲಿ ಮಿಂದು ಯುದ್ಧದಲ್ಲಿ ಸತ್ತವರನ್ನೆಲ್ಲಾ ಆವಾಹಿಸಿದರು. ಆಗ ಭಯಂಕರ ಶಬ್ದವು ಕೇಳಬಂದಿತು. ಪಾಂಡವ–ಕೌರವ ಪಡೆಗಳು ಯುದ್ಧ ಮಾಡಿದಾಗ ಕೇಳಿಬಂದಂಥ ಶಬ್ದ. ಅನಂತರ ಯುದ್ಧದಲ್ಲಿ ಅಸುನೀಗಿದವರೆಲ್ಲರೂ ಭೀಷ್ಮಾಚಾರ್ಯರ ನೇತೃತ್ವದಲ್ಲಿ ಭಾಗೀರಥಿ ನದಿಯಿಂದ ಎದ್ದು ಬಂದರು. ನೋಡುವುದಕ್ಕೆ ಎರಡು ಕಣ್ಣು ಸಾಲದಾಯಿತು. ಹಾಗೆ ಎದ್ದು ಬಂದವರಲ್ಲಿ ಪ್ರಖ್ಯಾತರಾಜರಿದ್ದರು. ಮಹಾಸಾಮಂತರಾದ ವಿರಾಟ–ದ್ರುಪದರೂ ಇದ್ದರು. ಘಟೋತ್ಕಚ, ಅಭಿಮನ್ಯು, ದ್ರೌಪದಿಯ ಪುತ್ರರು, ಕರ್ಣ, ದುರ್ಯೋಧನ, ಅವನ ಸೋದರರು, ಶಕುನಿಇವರೆಲ್ಲರೂ ನೀರಿನ ಅಲೆಗಳ ಮೇಲಿನಿಂದ ಎದ್ದು ಬಂದರು. ಅವರಲ್ಲಿ ಪಾಂಡವರ–ಕೌರವರ ಪರವಾಗಿ ಯುದ್ಧ ಮಾಡಿದ್ದ ರಾಜರುಗಳೂ ಇದ್ದರು. ವ್ಯಾಸರು ಧೃತರಾಷ್ಟ್ರನ ಬಳಿ ಬಂದು 'ದಿವ್ಯದೃಷ್ಟಿ'ಯನ್ನು ನೀಡಿದರು. ಧೃತರಾಷ್ಟ್ರನು ಎಲ್ಲರನ್ನೂ ನೋಡಿ ಆನಂದಿಸಿದನು. ಕಳೆದುಕೊಂಡಿದ್ದ ಎಲ್ಲಾ ಬಂಧುಗಳನ್ನು ನೋಡಿ ಕಣ್ತುಂಬಿಕೊಂಡನು. ಮೃತರು ಈಗ ಜೀವಂತ ಬಂಧುಗಳನ್ನು ಕಂಡರು. ಈ ಸಮಾಗಮದಲ್ಲಿ ಯಾವ ಬಗೆಯ ಮಾತ್ಸರ್ಯವೂ ಇರಲಿಲ್ಲ. ಅಲ್ಲಿ ದ್ವೇಷ ಮತ್ತು ಹಗೆತನಗಳೂ ಇರಲಿಲ್ಲ. ಎಲ್ಲೆಲ್ಲೂ ಸಂತೋಷ ಮೇರೆವರಿಯಿತು. ಈ ಭೇಟಿಯಲ್ಲಿ ದುಃಖ ಸುತಾರಾಂ ಇರಲಿಲ್ಲ. ಅಲ್ಲಿ ಭೀತಿಯೂ ಇರಲಿಲ್ಲ. ಅವರೆಲ್ಲಾ ಸಂತೋಷದಿಂದ ಕಲೆತು ಸರಸಸಲ್ಲಾಪಗಳಲ್ಲಿ ಆ ರಾತ್ರಿಯನ್ನು ಕಳೆದರು.

ವ್ಯಾಸರು ಪವಿತ್ರವಾದ ಭಾಗೀರಥಿ ನದಿಯ ನೀರಿನಲ್ಲಿ ನಿಂತಿದ್ದರು. ಅವರು ಮೃತರ ಪತ್ನಿಯರನ್ನು ಉದ್ದೇಶಿಸಿ 'ನಿಮ್ಮಲ್ಲಿ ಯಾರು ಯಾರು ನಿಮ್ಮ ಗಂಡಂದಿರು ಇರುವ ಪುಣ್ಯಲೋಕಕ್ಕೆ ಹೋಗಲು ಬಯಸುವಿರೋ ಅವರೆಲ್ಲರೂ ಈ ನದಿಯಲ್ಲಿ ಮುಳುಗಿ' ಎಂದರು. ತಕ್ಷಣವೇ ಅನೇಕ ಸ್ತ್ರೀಯರು ಹಿರಿಯರ ಅನುಜ್ಞೆ ಪಡೆದು ವ್ಯಾಸರು ಹೇಳಿದಂತೆ ನದಿಯಲ್ಲಿ ಮುಳುಗಿದರು. ಆ ಸಾಧ್ವೀಮಣಿಗಳು ಮನುಷ್ಯದೇಹವನ್ನು ಬಿಟ್ಟು ದಿವ್ಯದೇಹವನ್ನು ಪಡೆದರು. ಅವರ ಗಂಡಂದಿರೊಡನೆ ಅವರವರ ಲೋಕಗಳಿಗೆ ತೆರಳಿದರು. ಅಲ್ಲಿ ನೆರೆದಿದ್ದವರೆಲ್ಲರ ಜೀವನದಲ್ಲಿ ಅದೊಂದು ಅಸಾಧಾರಣ ಸಂದರ್ಭ ಒದಗಿತ್ತು. ಎಲ್ಲರಿಗೂ ವಿಶೇಷವಾದ ಅನುಭವ ಉಂಟಾಗಿತ್ತು. ಧೃತರಾಷ್ಟ್ರನ ಪಾಲಿಗೆ ಅದೊಂದು ಮಹತ್ತ್ವಪೂರ್ಣ ಅನುಭವವೇ ಆಗಿತ್ತು. ಅವನು ಹುಟ್ಟಿನಿಂದ ಮಕ್ಕಳನ್ನೇ ನೋಡಿರಲಿಲ್ಲ. ಅವನು ಈಗ ಪುತ್ರರನ್ನೂ ಸೊಸೆಯರನ್ನೂ ನೋಡಿದನು. ತನ್ನ ಪ್ರತಿಬಿಂಬದಂತಿದ್ದ ಪುತ್ರರನ್ನು ನೋಡಿ ಆನಂದಿಸಿದನು, ಧೃತರಾಷ್ಟ್ರನ ಮನಸ್ಸು ಉಪಶಮನಗೊಂಡಿತು. ಮೃತಗೊಂಡಿದ್ದವರನ್ನು ಜೀವಂತವಾಗಿ ನೋಡಿದ ಸಂತೋಷಆಶ್ಚರ್ಯದಲ್ಲಿ ಸಮಸ್ತರೂ ಇದ್ದರು. ಕೆಲವು ದಿನಗಳ ನಂತರ ಧರ್ಮರಾಯ ಮತ್ತು ಅವನ ತಮ್ಮಂದಿರು ಹಸ್ತಿನಾವತಿಗೆ ಹಿಂದಿರುಗಿದರು.

ಇದು ವ್ಯಾಸಭಾರತದ 'ಆಶ್ರಮವಾಸಿಕ ಪರ್ವ'ದಲ್ಲಿನ ಪ್ರಸಂಗ, ಶ್ರೀಕೃಷ್ಣ ಅರ್ಜುನನೊಬ್ಬನಿಗೆ ದಿವ್ಯದೃಷ್ಟಿಕೊಟ್ಟು ವಿಶ್ವರೂಪದರ್ಶನವನ್ನು ತೋರಿಸಿದ. ಇಲ್ಲಿ ಪಾಂಡವರು–ಕೌರವರು ಸಂಭ್ರಮವನ್ನು ಪರಸ್ಪರ ಹಂಚಿಕೊಂಡರು. ಅಲ್ಲಿ ದ್ವೇಷ ಇರಲಿಲ್ಲ. ಆನಂದದ ಹೊಳೆ ಹರಿಯುತ್ತಿತ್ತು. ಭಾಗೀರಥಿ ನದಿಯು ವ್ಯಾಸದರ್ಶನಕ್ಕೆ ಹಿನ್ನೆಲೆ ಒದಗಿಸಿತ್ತು. ಮಹಾಭಾರತದಲ್ಲಿ ಎಷ್ಟೋ ಅಪೂರ್ವ ಸಂದರ್ಭಗಳು ಬರುತ್ತವೆ. ಆದರೆ, ವ್ಯಾಸರು ಪ್ರತಿಯೊಬ್ಬರಿಗೂ ತೋರಿಸಿದ ಈ ದಿವ್ಯದರ್ಶನ ಸಾಹಿತ್ಯಕ ಪ್ರಸಂಗಗಳಲ್ಲಿ ಅಪೂರ್ವವಾದುದೇ ಸೈ.

■ ಪುರಂಜೀವಿ



॥ ಶ್ರೀ ಗುರು ಓಂ ಶ್ರೀ ಸದ್ಗುರು ಸಾಯಿರಾಂ ॥ ಭಾರತದ ಪ್ರಖ್ಯಾತ ಜ್ಯೋತಿಷ್ಯರು

ಬಿಳಿಗಿರಿ ರಂಗನಬೆಟ್ಟದಿಂದ ನೇರ ಪರಿಹಾರ.

**ಓಂ ಶ್ರೀ ಸಾಯಿಕೊಡಂಗಲ್ಲೂರು ಭಗವತಿ ಜ್ಯೋತಿಷ್ಯರು**

ಕೇರಳದ ಮಹಾಜ್ಞಾನಿ ದೈವಜ್ಞ । ಮಾತಾ ಕಾಳಿಕಾದೇವಿ ಆರಾಧಕರು

**ಪಂಡಿತ್ ಶಕ್ತಿಪ್ರಸಾದ್ ಗುರೂಜಿ 9916774449**



ನಿಮ್ಮ ಸಮಸ್ಯೆಗಳಾದ ಮಾಟ-ಮಂತ್ರ, ಶತ್ರುನಾಶ, ಸ್ತ್ರೀ-ಪುರುಷ ವಶೀಕರಣ, ಕೋರ್ಟ್‌ಕೇಸ್, ವ್ಯಾಪಾರದಲ್ಲ ತೊಂದರೆ, ಉದ್ಯೋಗ, ವಿದೇಶ ಪ್ರಯಾಣ, ಇನ್ನಿತರ ಗುಪ್ತ ಕಠಿಣ ಸಮಸ್ಯೆಗಳಿಗೆ ಕೇರಳದ ಶ್ರೀ ಆದಿ ದೈವಗಳಾದ, ಕೊಡಂಗಲ್ಲೂರು ಭಗವತಿ, ಮಾಂಡಂಗಾವ್ ಭಗವತಿ, ಚೋಟಾನಿಕೆರೆ ಭಗವತಿ, ಕಣತ್ತೂರ್ ನಾಲ್ವಾರ್ ದೈವಂ, ಶ್ರೀ ವಿಷ್ಣುಮಾಯೆ ಕುಟ್ಟಿಚಾತನ್ ತಪೋಶಕ್ತಿಯಿಂದ 2 ದಿನಗಳಲ್ಲಿ ಅಂತಿಮ ಪರಿಹಾರ ಮಾಡುತ್ತಾರೆ.

ಯಾವುದೇ ಹಳ್ಳಿ, ತಾಲ್ಲೂಕು, ಜಿಲ್ಲೆಗಳಿಂದ ಕರೆ ಮಾಡಿದರೆ ಫೋನಿನ ಮುಖಾಂತರ ಪರಿಹಾರ ತಿಳಿಸುತ್ತಾರೆ.

ಕೇರಳದ ಅಷ್ಟಮಂಗಲ ಪ್ರಶ್ನೆ, ಅರೋಢ ಪ್ರಶ್ನೆ, ತಾಂಬೂಲ ಪ್ರಶ್ನೆ, ದೈವ ಪ್ರಶ್ನೆ, ಕವಡೆ ಪ್ರಶ್ನೆ, ಮುಖಲಕ್ಷಣ, ಜನ್ಮ ದಿನಾಂಕ ನೋಡಿ ಸಂಪೂರ್ಣ ಭವಿಷ್ಯವನ್ನು ಫೋನಿನ ಮೂಲಕ ತಿಳಿಸುತ್ತಾರೆ.

ನಿಮ್ಮ ಯಾವುದೇ ಸಮಸ್ಯೆಗಳಿದ್ದರೂ ಗುಪ್ತವಾಗಿ ಇಡಲಾಗುವುದು.

Get your Any Problem 100% Solutions with in 2 Days.

ವಿ.ಸೂ.: ನಮ್ಮನ್ನು ಬಿಟ್ಟು ಬೇರೆ ಯಾರಾದಾರೂ ಪರಿಹಾರ ಮಾಡಿಕೊಟ್ಟಲ್ಲಿ ಅವರಿಗೆ ಸೂಕ್ತ ಬಹುಮಾನ ಕೊಡಲಾಗುವುದು.